ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಯತೀಶ್ ಉಳ್ಳಾಲ್ ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 26–09–2023 ರ ಮಂಗಳವಾರದಂದು ಪೂರ್ವಹ್ನ 11.30 ಗಂಟೆಗೆ ನಡೆದ ಪ್ರಾಧಿಕಾರದ 58 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ
4. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ.

ವಿಷಯ ಸಂಖ್ಯೆ (01): ದಿನಾಂಕ: 28–07–2023 ರಂದು ನಡೆದ ಪ್ರಾಧಿಕಾರದ 57ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 28–07–2023 ರಂದು ನಡೆದ ಪ್ರಾಧಿಕಾರದ 57ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಚರ್ಚಿಸಲಾಯಿತು. ಸದರಿ ಸಭೆಯ ನಡವಳಿಗಳ ವಿಷಯ ಸಂಖ್ಯೆ (12) ರಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿರುವ ಬೈಚನಹಳ್ಳಿ ಗ್ರಾಮದ ಸ.ನಂ 35 ರ ತಾವರೆಕೆರೆ, ಹಾಗೂ ಮುಳ್ಳುಸೋಗೆ ಗ್ರಾಮ, ಸ.ನಂ. 59 ರ ಸೋಮೇಶ್ವರ ದೇವರ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಚರ್ಚಿಸಿ, ಪೂರ್ವಾನುಮತಿಯನ್ನು ನೀಡುವಂತೆ ಮುಖ್ಯಾಧಿಕಾರಿ, ಪುರಸಭೆ ಇವರಿಗೆ ಮತ್ತು ತಹಶೀಲ್ದಾರರು, ಕುಶಾಲನಗರ ತಾಲ್ಲೂಕು ಇವರಿಗೆ ಮತ್ತೊಮ್ಮೆ ಪತ್ರ ಬರೆಯಲು ಹಾಗೂ ಸವಿಸ್ತಾರವಾದ ಅಂದಾಜು (Comprehensive Estimate) ಹಾಗೂ ವಿಸ್ತೃತ ಯೋಜನಾ ವರದಿಯನ್ನು (DPR) ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಸಿದ್ಧಪಡಿಸಲು ಚರ್ಚಿಸಿ, ತಾಂತ್ರಿಕ ಒಪ್ಪಿಗೆಯೊಂದಿಗೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಲು ಮತ್ತೊಮ್ಮೆ ಪತ್ರ ಬರೆದು ಮುಂದಿನ ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಲಾಗಿದ್ದು, ಅದರಂತೆ ಮುಖ್ಯಾಧಿಕಾರಿ, ಪುರಸಭೆ ಮತ್ತು ತಹಶೀಲ್ದಾರರು, ಕುಶಾಲನಗರ ಇವರಿಗೆ ದಿನಾಂಕ:05–09–2023 ರಂದು ಪತ್ರ ಬರೆದು ಸದರಿ ಕೆರೆಗಳ ಆರ್.ಟಿ.ಸಿ ಯಲ್ಲಿ ಸರ್ಕಾರದವರು ಎಂದು ನಮೂದಾಗಿರುವುದರಿಂದ ಸದರಿ ಕೆರೆಗಳು ಯಾವ ಇಲಾಖೆಯ ಮಾಲೀಕತ್ವಕ್ಕೆ ಒಳಪಟ್ಟಿದೆ ಎಂಬ ಮಾಹಿತಿಯನ್ನು ನೀಡಬೇಕೆಂದು ಕೋರಲಾಗಿದೆ. ದಿನಾಂಕ: 08–09–2023 ರಂದು ಸಣ್ಣ ನೀರಾವರಿ ಇಲಾಖೆ, ಮಡಿಕೇರಿ ಇವರಿಗೆ ಪತ್ರ ಬರೆದು ಸದರಿ ಕೆರೆಗಳ ಸವಿಸ್ತಾರವಾದ ಅಂದಾಜು (Comprehensive Estimate) ಹಾಗೂ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಿ ತಾಂತ್ರಿಕ ಒಪ್ಪಿಗೆಯೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ. ದಿನಾಂಕ:15–09–2023 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಉಪವಿಭಾಗ, ಮಡಿಕೇರಿ ಇವರು ಈ ಕಛೇರಿಗೆ ಪತ್ರ ಬರೆದು ಸದರಿ ಕೆರೆಗಳು ನಮ್ಮ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಸದರಿ ಕೆರೆಗಳ ಮಾಹಿತಿ ನಮ್ಮ ಬಳಿ ಇರುವುದಿಲ್ಲ, ಆದ್ದರಿಂದ ಸದರಿ

ಕೆರೆಗಳ ಅಭಿವೃದ್ಧಿ ಪಡಿಸುವ ಕಾಮಗಾರಿಯ ಯೋಜನಾ ವರದಿಯನ್ನು (DPR) Conslutant ಮುಖಾಂತರ ತಯಾರಿಸಿ ಈ ಕಛೇರಿಗೆ ಸಲ್ಲಿಸಿದಲ್ಲಿ, ಸದರಿ ಯೋಜನಾ ವರದಿಯನ್ನು (DPR) ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಕೋರಿ ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ.

ಸದರಿ ವಿಷಯವನ್ನು ಮತ್ತೊಮ್ಮೆ ಸಭೆಯಲ್ಲಿ ಚರ್ಚಿಸಿ, ಕುಶಾಲನಗರ ಯೋಜನಾ ಪ್ರಾಧಿಕಾರದಿಂದಲೇ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಲು ಸೂಕ್ತ ಕ್ರಮವಹಿಸಬೇಕೆಂದು ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು. ಇನ್ನುಳಿದ ನಡವಳಿಗಳನ್ನು ಓದಿ, ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಜುಲೈ ಮತ್ತು ಆಗಸ್ಟ್ 2023ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಜುಲೈ ಮತ್ತು ಆಗಸ್ಟ್ 2023ರ ಮಾಹೆಯ ಜಮಾ & ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಕ್ರ.. ಸಂ.	ಖಾತೆಯ ವಿವರ	ಪ್ರಾರಂಭಿಕ ಶಿಲ್ಕು ರೂ.ಗಳಲ್ಲಿ	ಮಾಹೆಯ ಜಮಾ. ರೂ.ಗಳಲ್ಲಿ	ಒಟ್ಟು	ಮಾಹೆಯ ಖರ್ಚು. ರೂ.ಗಳಲ್ಲಿ	ಉಳಿಕೆ ಶಿಲ್ಕು ರೂ.ಗಳಲ್ಲಿ
1	2	3	4	5	6	7
ಜುಲೈ–2023						
1	ಉಳಿತಾಯ ಶುಲ್ಕದ ಖಾತೆ	37,75,858=50	37,840=00	38,13,698=00	1,72,125=00	36,41,573=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,85,795=00	6,260=00	2,92,055=00	—	2,92,055=00
3	ಸೆಸ್ ಶುಲ್ಕದ ಖಾತೆ	2,06,670=00	3,050=00	2,09,720=00	—	2,09,720=00
ಒಟ್ಟು		42,68,323=50	47,150=00	43,15,473=00	1,72,125=00	41,43,348=50
ಆಗಸ್ಟ್–2023						
1	ಉಳಿತಾಯ ಶುಲ್ಕದ ಖಾತೆ	36,41,573=50	45,260=00	36,86,833=50	1,60,988=00	35,25,845=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,92,055=00	6,160=00	2,98,215=00	—	2,98,215=00
3	ಸೆಸ್ ಶುಲ್ಕದ ಖಾತೆ	2,09,720=00	2,430=00	2,17,150=00	—	2,12,150=00
ಒಟ್ಟು		41,43,348=50	53,850=00	41,97,198=50	1,60,988=50	40,36,210=50

ನಿರ್ಣಯ: ಜುಲೈ ಮತ್ತು ಆಗಸ್ಟ್ 2023 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು

ವಿಷಯ ಸಂಖ್ಯೆ (3): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 60/2 ರಲ್ಲಿನ 6.92 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವ ಸಂಬಂಧ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರೊಂದಿಗೆ ಚರ್ಚಿಸುವ ಬಗ್ಗೆ. **(ಅರ್ಜಿದಾರರು:–ಶ್ರೀ ಶಿವಲಿಂಗಯ್ಯ)**

ಟಿಪ್ಪಣಿ: ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ದಿನಾಂಕ: 29–01–2020 ರಂದು ಸದರಿ ಜಮೀನಿನ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ಮಾಡಕೊಡಬೇಕಾಗಿ ಅರ್ಜಿದಾರರು ಕೋರಿದ್ದು, ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ ಎಂಬುದಾಗಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾದಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ದಿನಾಂಕ:26–12–2011 ರಂದು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿದ್ದು, ಸಲ್ಲಿಸಿರುವ ಭೂ–ಪರಿವರ್ತನಾ ಆದೇಶದ ಅವಧಿಯು ಮುಕ್ತಾಯಗೊಂಡ ಕಾರಣ ಸದರಿ ಭೂ–ಪರಿರ್ತನಾ ಆದೇಶವನ್ನು ಕಂದಯ ಇಲಾಖೆಯಿಂದ ನವೀಕರಿಸಿ ಸಲ್ಲಿಸಿದ ನಂತರ, ವಲಯ ನಿಯಮಾನುಸಾರ ಕರಡು ವಸತಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿ, ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 29–10–2020 ರಂದು ಸದರಿ ಜಮೀನಿನ ಭೂಪರಿವರ್ತನಾ ಆದೇಶವನ್ನು ನವೀಕರಿಸಿ ಆದೇಶಿಸಿರುತ್ತಾರೆ. ದಿನಾಂಕ:24–12–2020 ರಂದು ಸದರಿ ಜಮೀನಿನ ಕರಡು ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸುವ ಸಂಬಂಧ ಕಾರ್ಯಾದೇಶವನ್ನು ಈ ಕಛೇರಿಯಿಂದ ನೀಡಲಾಗಿದೆ.

ದಿನಾಂಕ:01–03–2021 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಪತ್ರ ಬರೆದು ಈಗಾಗಲೇ ಕೂಡ್ಲೂರು ಗ್ರಾಮ ಸ.ನಂ. 60/2 ರಲ್ಲಿನ 6.92 ಎಕರೆ ಜಮೀನಿಗೆ ಬಹುನಿವೇಶನ ಕರಡು ವಸತಿ ವಿನ್ಯಾಸ ನಕ್ಷೆ ತಯಾರಿಸಿರುವುದು ಸರಿಯಷ್ಟೆ, ಆದರೆ ಗ್ರಾಮಪಂಚಾಯಿತಿ ಸಾಮಾನ್ಯ ಸಭೆ ದಿನಾಂಕ: 19–02–2021 ರ ಠರಾವು ಸಂಖ್ಯೆ 12 ರಂತೆ ಜಾಗವನ್ನು ಪರಿಶೀಲಿಸಲು ಗ್ರಾಮಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿದಾಗ ಗುರುತಿಸಿರುವ ಯಾವುದೇ ಹದ್ದುಬಸ್ತುವಿನ ಸರ್ವೆ ಕಲ್ಲುಗಳು ಇರುವುದಿಲ್ಲ ಹಾಗೂ ಪಕ್ಕದಲ್ಲಿ 59/2 ರ ಪೈಸಾರಿ ಜಾಗ ಒತ್ತುವರಿಯಾಗಿರುವ ಬಗ್ಗೆ ಸದಸ್ಯರು ಅಭಿಪ್ರಾಯ ಪಟ್ಟಿರುವುದರಿಂದ ತಾವುಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಗಡಿ ಗುರುತಿಸಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕಾಗಿ ಹಾಗೂ ವಿನ್ಯಾಸ ನಕ್ಷೆಯಲ್ಲಿ ಈಗಾಗಲೇ ಸಾರ್ವಜನಿಕ ರಸ್ತೆ ಇರುವುದರಿಂದ ವಿನ್ಯಾಸ ನಕ್ಷೆಯಲ್ಲಿರುವಂತೆ ರಸ್ತೆಯನ್ನು ಗುರುತಿಸಿ ಕೊಡುವಂತೆ ಕೋರಿರುತ್ತಾರೆ.

ಶ್ರೀ ವೆಂಕಟೇಶ್ ಕೆ.ಆರ್ ಮತ್ತು ಚಂದ್ರು ಕೆ.ಆರ್ ಕೂಡ್ಲೂರು ಗ್ರಾಮ ಇವರು ದಿನಾಂಕ: 03–03–2021 ರಂದು ಈ ಕಛೇರಿಗೆ ತಕರಾರು ಅರ್ಜಿ ಸಲ್ಲಿಸಿ, *"ಸದರಿ ಆಸ್ತಿಯು ಕಂದಾಯ ದಾಖಲೆಗಳ ಆಧಾರದಲ್ಲಿ ಕ್ರಯಪತ್ರಗಳಲ್ಲಿ ನೋಂದಣಿಯಾಗಿರುತ್ತದೆ ವಿನ: ಹಕ್ಕುಗಳ ಮೇಲಿಂದಲ್ಲ. ಸದರಿ ಜಮೀನಿನ ಮಾಲೀಕತ್ವಕ್ಕೆ ಸಂಬಂದಿಸಿದಂತೆ ಸಿವಿಲ್ ದಾವೆ ಹೂಡಲು ತಯಾರಿ ನಡೆಸಿದ್ದೇವೆ. ಆದ್ದರಿಂದ ತಾವು ಸೂಕ್ತ ತನಿಖೆ ನಡೆಸದೆ, ಲೇಔಟ್ ಗೆ ಅವಕಾಶ ಮಾಡಿಕೊಡುವ ಯಾವುದೇ ಕ್ರಮವನ್ನು ಕೈಗೊಳ್ಳಬಾರದು"* ಎಂದು ವಿನಂತಿಸಿರುತ್ತಾರೆ.

ಸದರಿ ಎರಡು ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ದಿನಾಂಕ: 31–03–2021 ರಂದು ಸಭೆಯನ್ನು ನಿಗಧಿಪಡಿಸಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರಿಗೆ ಸಭಾ ಸೂಚನಾ ಪತ್ರವನ್ನು ಕಳುಹಿಸಲಾಗಿದೆ. ದಿನಾಂಕ:31–03–2021 ರಂದು ನಡೆದ 43ನೇ ಸಭೆಯ ವಿಷಯ ಸಂಖ್ಯೆ (8) ರಲ್ಲಿ ತಕರಾರು ಅರ್ಜಿಯ ಬಗ್ಗೆ ಮಂಡಿಸಿ ಚರ್ಚಿಸಿದ್ದು, ಪ್ರಸ್ತುತ ವಿನ್ಯಾಸ ಅನುಮೋದನೆಗೆ ಸಲ್ಲಿಸಿರುವ ದಾಖಲೆಗಳು ಇತ್ತೀಚಿನವುಗಳಾಗಿದ್ದು ಸದರಿ ದಾಖಲೆಗಳನ್ವಯ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಹಾಲಿ ಮಾಲೀಕರಾದ ಶ್ರೀ ಎನ್ ಶಿವಲಿಂಗಯ್ಯ ಇವರಿಗೆ ಜಮೀನು From-10 ರಡಿ LRM/v/d- 3/78-79 ದಿನಾಂಕ: 10–11–1981 ರನ್ವಯ ಸೆಕ್ಕೆಟೆರಿ/ತಹಶೀಲ್ದಾರರು, ಭೂ ನ್ಯಾಯಮಂಡಳಿ ಸೋಮವಾರಪೇಟೆ ಇವರಿಂದ ಮಂಜೂರಾಗಿರುವ ಜಮೀನಾಗಿದ್ದು, ದೂರುದಾರರಾದ ಶ್ರೀ ವೆಂಕಟೇಶ್ ಕೆ.ಆರ್. ಮತ್ತು ಚಂದ್ರು ಕೆ.ಆರ್ ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದ ಸಭೆಯು ಸದರಿ ದಾಖಲೆಗಳು ಭೂ

ನ್ಯಾಯಮಂಡಳಿಯಿಂದ ಜಮೀನು ಎನ್. ಶಿವಲಿಂಗಯ್ಯ ಇವರಿಗೆ ಮಂಜೂರಾಗುವ ಪೂರ್ವದಲ್ಲಿ ಇದ್ದಂತಹ ಮಾಲೀಕರುಗಳ ಹೆಸರಿನಲ್ಲಿ ಇರುವುದು ಕಂಡು ಬಂದಿರುವುದರಿಂದ ವಿಷಯವು ಸಿವಿಲ್ ವ್ಯಾಜ್ಯಕ್ಕೆ ಒಳಪಟ್ಟಿರುವುದರಿಂದ ಸದರಿ ವಿಷಯವನ್ನು ಬಗೆಹರಿಸುವುದು ಈ ಕಾರ್ಯವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ ಎಂಬುದಾಗಿ ದೂರುದಾರರಿಗೆ ಹಿಂಬರಹ ನೀಡುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು ಮತ್ತು ಚರ್ಚೆ ಮುಂದುವರೆದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಸಭೆಗೆ ಹಾಜರಾಗದೇ ಇರುವುದರಿಂದ ವಿಷಯವನ್ನು ಮುಂದಿನ ಸಭೆಗೆ ಮಂಡಿಸುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ಸಭೆಯ ನಿರ್ಣಯದಂತೆ ದಿನಾಂಕ:17–04–2021 ರಂದು ಶ್ರೀ ವೆಂಕಟೇಶ್ ಕೆ.ಆರ್ ಮತ್ತು ಚಂದ್ರು ಕೆ.ಆರ್. ಕೂಡ್ಲೂರು ಗ್ರಾಮ ಇವರಿಗೆ ಪತ್ರ ಬರೆದು ಭೂಪರಿವರ್ತನೆ ಹಾಗೂ ಲೇಔಟ್ ಕುರಿತಂತೆ ತಾವು ಸಲ್ಲಿಸಿರುವ ಜಮೀನಿನ ಮಾಲೀಕತ್ವದ ಬಗೆಗಿನ ತಕರಾರು ಅರ್ಜಿಯು ಸಿವಿಲ್ ವ್ಯಾಜ್ಯಕ್ಕೆ ಒಳಪಟ್ಟಿದ್ದು ಸದರಿ ವಿಷಯವನ್ನು ಬಗೆಹರಿಸುವುದು ಈ ಕಛೇರಿಯ ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ ಎಂಬುದಾಗಿ ತಿಳಿಸಲಾಗಿದೆ ಮತ್ತು ದಿನಾಂಕ:07–05–2023 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಪತ್ರ ಬರೆದು ಪ್ರಾಧಿಕಾರದ ಮುಂದಿನ ಸಭೆಗೆ ಖುದ್ದು ಹಾಜರು ಇರುವಂತೆ ತಿಳಿಸಲಾಗಿದೆ.

ದಿನಾಂಕ:02–07–2021 ರಂದು ನಡೆದ ಪ್ರಾಧಿಕಾರದ 44ನೇ ಸಭೆಯ ವಿಷಯ ಸಂಖ್ಯೆ(11) ರಲ್ಲಿ ಸದರಿ ವಿನ್ಯಾಸ ನಕ್ಷೆಯ ಸ್ಥಳಪರಿಶೀಲನೆ ನಡೆಸಿ ಗಡಿ ಗುರುತಿಸಿ, ರಸ್ತೆಯನ್ನು ಗುರುತಿಸಿಕೊಡುವ ಬಗ್ಗೆ ವಿಷಯವನ್ನು ಮಂಡಿಸಲಾಗಿದೆ. ಸದರಿ ಸಭೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಮತ್ತೊಮ್ಮೆ ಗೈರುಹಾಜರಾಗಿರುವುದಾಗಿ ನಡಾವಳಿಯಲ್ಲಿ ನಮೂದಿಸಲಾಗಿದೆ. ಸದರಿ ಸಭೆಯ ನಿರ್ಣಯದಲ್ಲಿ ಪ್ರಸ್ತಾವಿತ ಜಮೀನಿನ ಸ್ಥಳ ಪರಿಶೀಲನೆಯನ್ನು ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರುಗಳೊಂದಿಗೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಹಾಗೂ ಜಮೀನಿನ ಮಾಲೀಕರೊಂದಿಗೆ ಜಂಟಿಯಾಗಿ ಸ್ಥಳಪರಿಶೀಲಿಸುವುದು ಎಂಬುದಾಗಿ ತೀರ್ಮಾನಿಸಿತು. ಅನುಮೋದಿಸಿರುವ ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಿರುವ ಜಮೀನಿನ ಮೇಲೆ ಹಾದುಹೋಗಿರುವ ಸಾರ್ವಜನಿಕ ರಸ್ತೆಯ ಪಂಕ್ತಿಕರಣದಲ್ಲಿ ವ್ಯತ್ಯಾಸವಿರುವುದರಿಂದ ಸರ್ವೆ ನಕ್ಷೆಯಲ್ಲಿ ರಸ್ತೆ ಪಂಕ್ತಿಕರಣ ಸರಿಪಡಿಸಿ ವಿನ್ಯಾಸ ನಕ್ಷೆ ಪರಿಷ್ಕರಣೆಗೆ ಪ್ರಸ್ತಾವನೆ ಸಲ್ಲಿಸುವಂತೆ ಹಾಗೂ Total Station ಸರ್ವೆಯ ದಾಖಲೆಯನ್ನು ಸಲ್ಲಿಸಲು ಸೂಚಿಸಲು ಹಾಗೂ ಪ್ರಸ್ತಾವಿತ ಜಮೀನಿನ ಪಕ್ಕದಲ್ಲಿರುವ ಸ.ನಂ. 59/2 ರ ಪೈಸಾರಿ ಜಾಗ ಒತ್ತುವರಿಯಾಗಿರಲು ಬಗ್ಗೆ ಕಂದಾಯ ಇಲಾಖೆಯಿಂದ ಗ್ರಾಮಪಂಚಾಯಿತಿಯು ಸರ್ವೆ ಮಾಡಿಕೊಂಡು ಗಡಿಗುರುತು ಮಾಡಿಸಿಕೊಳ್ಳುವಂತೆ ಸೂಚಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಇವರಿಗೆ ಪತ್ರ ಬರೆಯುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು. ಅದರಂತೆ ದಿನಾಂಕ:09–07–2021 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಇವರಿಗೆ ಪತ್ರವನ್ನು ಬರೆಯಲಾಗಿದೆ.

ದಿನಾಂಕ:09–08–2021 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ಜಮೀನಿನ ಮೇಲೆ ಹಾದು ಹೋಗಿರುವ ಸಾರ್ವಜನಿಕ ರಸ್ತೆಯ ಪಂಕ್ತಿಕರಣದಲ್ಲಿ ವ್ಯತ್ಯಾಸವಿರುವುದರಿಂದ ಸರ್ವೆ ನಕ್ಷೆಯಲ್ಲಿ ರಸ್ತೆ ಪಂಕ್ತಿಕರಣ ಸರಿಪಡಿಸಿ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಡಬೇಕೆಂದು ಕೋರಲಾಗಿದೆ. ಸದರಿ ವಿಷಯವನ್ನು ದಿನಾಂಕ: 18–09–2021 ರಂದು ನಡೆದ 45ನೇ ಸಭೆಯಲ್ಲಿ ವಿಷಯ ಸಂಖ್ಯೆ(4) ರಲ್ಲಿ ಮಂಡಿಸಲಾಗಿದ್ದು, ಪ್ರಸ್ತಾವಿತ ಜಮೀನಿನ ಮೇಲೆ (ದಕ್ಷಿಣ ದಿಕ್ಕಿನಲ್ಲಿ) ಹಾದುಹೋಗಿರುವ ಹಾಲಿ ರಸ್ತೆಯ ಪಂಕ್ತಿಕರಣವನ್ನು ಸರ್ವೆ ನಕ್ಷೆಯಲ್ಲಿ ಸರಿಪಡಿಸಿ ಅದರಂತೆಯೇ ವಿನ್ಯಾಸ ನಕ್ಷೆಯಲ್ಲಿ ರಸ್ತೆಯನ್ನು ಪಂಕ್ತಿಕರಿಸಿ ಪರಿಷ್ಕೃತ ವಿನ್ಯಾಸ ನಕ್ಷೆ ಸಲ್ಲಿಸಿದ್ದು, ಜಮೀನು ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿರುವುದರಿಂದ ಹಾಗೂ ಉದ್ಯಾನವನ

ಮತ್ತು ಆಟದ ಮೈದಾನ ಉಪಯೋಗಕ್ಕಾಗಿ 2803.01 ಚ.ಮೀ (ಶೇ. 10.01%), ನಾಗರೀಕ ಸೌಲಭ್ಯಕ್ಕಾಗಿ 1401.46 ಚ.ಮೀ (ಶೇ. 5%), ರಸ್ತೆಗಾಗಿ 8941.43 ಚ.ಮೀ (ಶೇ. 31.93%) ಕಾಯ್ದಿರಿಸಿ ಉಳಿಕೆ 14858.34 ಚ.ಮೀ (53.06%) ವಸತಿ ಉದ್ದೇಶಕ್ಕಾಗಿ ಮೀಸಲಿರಿಸಿ ನಿವೇಶನದ ಮೇಲೆ ಹಾದು ಹೋಗಿರುವ ಹಾಲಿ ರಸ್ತೆಯನ್ನು (ದಕ್ಷಿಣ ದಿಕ್ಕಿನಲ್ಲಿ) 12.0 ಮೀ ಅಗಲಕ್ಕೆ ಪ್ರಸ್ತಾವಿಸಿ ನಿಯಮಾನುಸಾರ ವಿನ್ಯಾಸ ನಕ್ಷೆ ತಯಾರಿಸಿ ಸಲ್ಲಿಸಿರುವುದರಿಂದ ಹಾಗೂ **ಜಮೀನಿನ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಎತ್ತರ ಪ್ರದೇಶ (ಗುಡ್ಡ) ಇದ್ದು, ಜಮೀನಿನ ಪೂರ್ವದ ಕಡೆಗೆ ಇಳಿಜಾರಾಗಿರುವುದರಿಂದ ಗುಡ್ಡ ಜರುಗದಂತೆ ಜಮೀನಿನ ಪಶ್ಚಿಮ, ಉತ್ತರ ಹಾಗೂ ಪೂರ್ವ ದಿಕ್ಕಿನಲ್ಲಿ Retaining wall ನಿರ್ಮಿಸುವ ಷರತ್ತು ವಿಧಿಸಿ ಪರಿಷ್ಕೃತ ಬಹು–ನಿವೇಶನ ವಿನ್ಯಾಸ ನಕ್ಷೆಗೆ ನಿಯಮನುಸಾರ ಅನುಮೋದನೆ ನೀಡಬಹುದೆಂದು ಸದಸ್ಯಕಾರ್ಯದರ್ಶಿಗಳು ಅಭಿಪ್ರಾಯ ನೀಡಿದ್ದು, ಈ ಹಿಂದೆ ನೀಡಿದ್ದ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಿ (ಪರಿಷ್ಕೃತ) ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತ Retaining wall ನಿರ್ಮಿಸುವಂತೆ ಆದೇಶ ಪತ್ರದಲ್ಲಿ ಷರತ್ತು ವಿಧಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಿ, ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತ Retaining wall ನಿರ್ಮಿಸುವಂತೆ ಆದೇಶ ಪತ್ರದಲ್ಲಿ ಷರತ್ತು ವಿಧಿಸಿ ಮತ್ತು ಜಮೀನಿನ ಇಳಿಜಾರು ಕತ್ತರಿಸುವಿಕೆಯು ಯಾವುದೇ ಕಾರಣಕ್ಕೂ 45 ಡಿಗ್ರಿಯನ್ನು ಮೀರತಕ್ಕದ್ದಲ್ಲ ಎಂಬ ಷರತ್ತನ್ನು ವಿಧಿಸಿ, ಕಂದಾಯ ಇಲಾಖೆಯಿಂದ ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆಯ ಎಲ್ಲೆಗಳ ಆಧಾರದ ಮೇಲೆ ಪರಿಷ್ಕೃತ ಕರಡು ವಸತಿ ವಿನ್ಯಾಸ ನಕ್ಷೆಗೆ ದಿನಾಂಕ:29–09–2021 ರಂದು ಅನುಮೋದನೆ ನೀಡಲಾಗಿದೆ.**

ಈ ಸಂಬಂಧ ಅರ್ಜಿದಾರರು ಅಫಿಡೆವಿಟ್ ಸಲ್ಲಿಸಿದ್ದು (ಅಫಿಡೆವಿಟ್ ಸಂಖ್ಯೆ IN-KA17310737848486T) ಅದರಲ್ಲಿ *"ಸದರಿ ಜಮೀನಿನ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಗುಡ್ಡ ಇರುವುದರಿಂದ ಹಾಗೂ ಪೂರ್ವ ದಿಕ್ಕಿನಲ್ಲಿ ಇಳಿಜಾರು ಇರುವುದರಿಂದ ಸದರಿ ಗುಡ್ಡ ಜರುಗದಂತೆ ಸೂಕ್ತವಾದ (Retaining wall) ತಡೆಗೋಡೆ ನಿರ್ಮಿಸುತ್ತೇವೆ ಒಂದು ವೇಳೆ ಸದರಿ ಗುಡ್ಡಗಳು ಜರುಗಿ ಯಾವುದೇ ವಿಕೋಪ ಅನಾಹುತಗಳ ಆದಲ್ಲಿ ಹಾಗೂ ನಿವೇಶನ ಖರೀದಿಸುವವರಿಗೆ ಮತ್ತು ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಮತ್ತು ಹೊಣಗಾರಿಕೆಯನ್ನು ನಾನೇ ವಹಿಸಿಕೊಂಡಿರುತ್ತೇನೆ ಹಾಗೂ ಯೋಜನಾ ಪ್ರಾಧಿಕಾರವು ಇದಕ್ಕೆ ಜವಾಬ್ದಾರರಾಗಿರುವುದಿಲ್ಲ"* ಎಂದು ಪ್ರಮಾಣೀಕರಿಸಿರುತ್ತಾರೆ.

ಅರ್ಜಿದಾರರು ದಿನಾಂಕ:04–07–2023 ರಂದು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಇವರು ದಿನಾಂಕ: 07–07–2023 ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ವಸತಿ ಬಡಾವಣೆಯ ಮೂಲಭೂತ ಸೌಕರ್ಯದ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಯ ದೃಢೀಕರಣ ಪತ್ರವನ್ನು ಈಗಾಗಲೇ ತಮ್ಮ ಕಛೇರಿಗೆ ಸಲ್ಲಿಸಿದ್ದು, ಈ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಿ ನಿಯಮಾನುಸಾರ ಕೈಗೊಳ್ಳುವಂತೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ ಎಂಬುದಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:28–07–2023 ರಂದು ನಡೆದ ಪ್ರಾಧಿಕಾರದ 57ನೇ ಸಭೆಯ ವಿಷಯ ಸಂಖ್ಯೆ(5) ರಲ್ಲಿ ಚರ್ಚಿಸಿದ್ದು, ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತವಾದ ತಡೆಗೋಡೆ (Retaining wall) ಯನ್ನು ಅರ್ಜಿದಾರರು ಇದುವರೆಗೂ ನಿರ್ಮಿಸಿರುವುದಿಲ್ಲ ಅದಲ್ಲದೆ ಉದ್ಯಾನವನವನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಇದರ ಬಗ್ಗೆ ಚರ್ಚಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರಿಗೆ ಮುಂದಿನ ಪ್ರಾಧಿಕಾರದ ಸಭೆಗೆ ಹಾಜರಾಗಲು ಪತ್ರ ಬರೆದು, ಮುಂದಿನ ಸಭೆಯಲ್ಲಿ ಸದರಿ ಕಡತದ ಬಗ್ಗೆ ಚರ್ಚಿಸಲು ನಿರ್ಣಯಸಲಾಗಿದೆ. ಅದರಂತೆ ದಿನಾಂಕ:03–08–2023 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರಿಗೆ ಪತ್ರ ಬರೆದು ಸದರಿ ವಿಷಯದ ಬಗ್ಗೆ ಚರ್ಚಿಸಲು ಮುಂದಿನ ಸಭೆಗೆ ಹಾಜರಾಗುವಂತೆ ಕೋರಲಾಗಿದೆ.

ದಿನಾಂಕ: 30–08–2023 ರಂದು ಅರ್ಜಿದಾರರಿಗೆ ಹಿಂಬರಹ ನೀಡಿ ಇತ್ತೀಚಿನ ಇ.ಸಿ. ಪ್ರತಿ, ಸೆಸ್ಕಾಂ ಇಲಾಖೆಯವರು ನೀಡಿರುವ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರದ ಮೂಲ ಪ್ರತಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ನೀಡಿರುವ ನಿರಾಕ್ಷೇಪಣ ಪತ್ರದ ಪ್ರತಿ ಮತ್ತು ಪ್ರಸ್ತಾವನೆ ಪ್ರತಿಯ ಮೂಲ ಪ್ರತಿಯನ್ನು ಸಲ್ಲಿಸುವಂತೆ ಹಿಂಬರಹ ನೀಡಲಾಗಿದೆ. ದಿನಾಂಕ: 30–08–2023 ರಂದು ಅರಣ್ಯ ವಲಯಾಧಿಕಾರಿಗಳು, ಕುಶಾಲನಗರ ಇವರಿಗೆ ಪತ್ರ ಬರೆದು ಸದರಿ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಗುಡ್ಡಗಾಡು ಪ್ರದೇಶ (Hillock) ಕಂಡುಬಂದಿರುವುದರಿಂದ ಸರ್ವೆ ನಂಬರ್‌ಗಳಾದ 59/2, 59/1, 60/1, 60/2, 66/3, 60/4, 65/3, 65/1, 67/2 ಗಳನ್ನು ಪರಿಶೀಲಿಸಿ ಸದರಿ ಜಮೀನುಗಳು ಅರಣ್ಯ ಇಲಾಖೆಗೆ ಸೇರಿದ್ದರೆ ಮಾಹಿತಿಯನ್ನು ನೀಡಬೇಕೆಂದು ಹಾಗೂ ಸ.ನಂ. 59 ಅರಣ್ಯ ಇಲಾಖೆಗೆ ಒಳಪಟ್ಟಿದ್ದರೆ ಅದಕ್ಕೆ ಸೂಕ್ತವಾದ ಬಫರ್ ಅನ್ನು ಬಿಡಬೇಕು ಎಂಬುದರ ಮಾಹಿತಿಯನ್ನು ನೀಡಬೇಕೆಂದು ಕೋರಲಾಗಿದೆ ಮತ್ತು ತಹಶೀಲ್ದಾರ್, ಕುಶಾಲನಗರ ಇವರಿಗೆ ಪತ್ರ ಬರೆದು ಗ್ರಾಮನಕ್ಷೆಯನ್ನು ಪರಿಶೀಲಿಸಿ ಗ್ರಾಮನಕ್ಷೆಯಲ್ಲಿ ಕೂಡ್ಲೂರು ಗ್ರಾಮದ ಸ.ನಂ. 59 ರ ಜಮೀನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದರ ಬಗ್ಗೆ ಮಾಹಿತಿ ನೀಡಲು ಹಾಗೂ ಬಫರ್‌ಗಾಗಿ ಎಷ್ಟು ವಿಸ್ತೀರ್ಣದ ಜಮೀನನ್ನು ಕಾಯ್ದಿರಿಸಬೇಕಾಗಿರುತ್ತದೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಕೋರಲಾಗಿದೆ. ದಿನಾಂಕ:05–09–2023 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸದರಿ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಗುಡ್ಡಗಾಡು ಪ್ರದೇಶ (Hillock) ಕಂಡುಬಂದಿರುವುದರಿಂದ ಸದರಿ ಜಮೀನಿನ ಸುರಕ್ಷತೆಯ ದೃಷ್ಟಿಯಿಂದ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಡಿಕೇರಿ ಇವರೊಂದಿಗೆ ಜಂಟಿಪರಿಶೀಲನೆ ನಡೆಸಿ, ಅವರ ಅಭಿಪ್ರಾಯ ಪಡೆದುಕೊಂಡು ನಂತರ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಗೆ ಸದರಿ ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡಗಾಡು (Hillock) ಪ್ರದೇಶವನ್ನು ಪರಿಶೀಲಿಸಿ ಅಭಿಪ್ರಾಯ ನೀಡಲು ಸದರಿಯವರಿಗೆ ಆದೇಶವನ್ನು ನೀಡಬೇಕೆಂದು ಪತ್ರ ಬರೆದು ಕೋರಲಾಗಿದೆ. ಸದರಿ ವಿಷಯದ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರೊಂದಿಗೆ ಚರ್ಚಿಸಲು ವಿಷಯವನ್ನು ಮತ್ತೊಮ್ಮೆ ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆಯನ್ನು ಮಾಡಲಾಗಿದ್ದು, ಸದರಿ ವಿನ್ಯಾಸ ನಕ್ಷೆಯಲ್ಲಿ ಬರುವ ಎಲ್ಲಾ ನಿವೇಶನಗಳ ಅಳತೆಗಳನ್ನು ಮಾಡಲಾಗಿರುತ್ತದೆ. ಸದರಿ ಜಮೀನಿನ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತವಾದ ತಡೆಗೋಡೆ (Retaining wall) ಯನ್ನು ನಿರ್ಮಿಸುವ ನಿಬಂಧನೆಗೆ ಅರ್ಜಿದಾರರು ಒಳಪಟ್ಟಿದ್ದು, ಇದುವರೆಗೂ ತಡೆಗೋಡೆಯನ್ನು ನಿರ್ಮಿಸಿರುವುದಿಲ್ಲ. ಟಿಪ್ಪಣಿಯಲ್ಲಿ ವಿವರಿಸಿರುವಂತೆ ಅರ್ಜಿದಾರರು ನೀಡಿರುವ ಅಫಿಡೆವಿಟ್‌ನಲ್ಲಿ *"ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಮತ್ತು ಹೊಣಗಾರಿಕೆಯನ್ನು ನಾನೇ ವಹಿಸಿಕೊಂಡಿರುತ್ತೇನೆ ಹಾಗೂ ಯೋಜನಾ ಪ್ರಾಧಿಕಾರವು ಇದಕ್ಕೆ ಜವಾಬ್ದಾರರಾಗಿರುವುದಿಲ್ಲ"* ಎಂದು ಪ್ರಮಾಣೀಕರಿಸಿರುವುದರಿಂದ ಹಾಗೂ ಜಮೀನಿನ ಸುರಕ್ಷತೆಯ ದೃಷ್ಟಿಯಿಂದ ಉತ್ತರ ದಿಕ್ಕಿನಲ್ಲಿರುವ ನಿವೇಶನಗಳು ಪಕ್ಕದ ಸರ್ವೆ ನಂಬರಿನ ಜಮೀನಿಗಿಂತ ತಗ್ಗು ಪ್ರದೇಶದಲ್ಲಿ ಇರುವುದರಿಂದ ತಡೆಗೋಡೆ ನಿರ್ಮಿಸುವುದು ಅತ್ಯಗತ್ಯವಾಗಿರುತ್ತದೆ. ಅರ್ಜಿದಾರರು ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ಮುಕ್ತಾಯಗೊಳಿಸಿರುವ ಧೃಡೀಕರಣ ಪತ್ರದ ನಕಲು ಪ್ರತಿಯನ್ನು ಸಲ್ಲಿಸಿದ್ದು, ಸ್ಥಳದಲ್ಲಿ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದರಿ ಜಮೀನು ಎರಡು ಉದ್ಯಾನವನಗಳನ್ನು ಹೊಂದಿದ್ದು, ಪೂರ್ವ ದಿಕ್ಕಿನಲ್ಲಿರುವ ಉದ್ಯಾನವನಕ್ಕೆ ನಾಗರೀಕ ಸೌಲಭ್ಯ ನಿವೇಶನವು ಹೊಂದುಕೊಂಡಿರುತ್ತದೆ. ನಾಗರೀಕ ಸೌಲಭ್ಯ ನಿವೇಶನ ಹಾಗೂ ಉದ್ಯಾನವನಗಳನ್ನು ಒಟ್ಟುಗೂಡಿಸಿ ತಂತಿಬೇಲಿ ಹಾಕಿದ್ದು, ಅವುಗಳನ್ನು ಬೇರ್ಪಡಿಸಲು ಕಾಂಪೌಂಡ್ ನಿರ್ಮಿಸಬೇಕಾಗಿರುತ್ತದೆ. ಸದರಿ ವಿನ್ಯಾಸದಲ್ಲಿ ಬರುವ ರಸ್ತೆ, ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು

ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸುವುದು ಬಾಕಿ ಇರುತ್ತದೆ.

ಟಿಪ್ಪಣಿಯಲ್ಲಿ ಕಂಡಿಕೆ(4) ರಲ್ಲಿ ವಿವರಿಸಿರುವಂತೆ ಶ್ರೀ ವೆಂಕಟೇಶ್ ಕೆ.ಆರ್ ಮತ್ತು ಚಂದ್ರು ಕೆ.ಆರ್. ಕೂಡ್ಲೂರು ಗ್ರಾಮ ಇವರು ಜಮೀನಿನ ಮಾಲೀಕತ್ವದ ಬಗ್ಗೆ ನ್ಯಾಯಾಲಯದಲ್ಲಿ ಯಾವುದಾದರೂ ದಾವೆ ಹೂಡಿದ್ದರೆ ಈ ಬಗ್ಗೆ ವಕೀಲರಿಂದ ಕಾನೂನು ಸಲಹೆಯನ್ನು ಪಡೆದುಕೊಳ್ಳುವುದು ಸೂಕ್ತವಾಗಿರುತ್ತದೆ.

ಟಿಪ್ಪಣಿಯಲ್ಲಿ ಕಂಡಿಕೆ(11)ರಲ್ಲಿ ವಿವರಿಸಿರುವಂತೆ ಸದರಿ ಜಮೀನಿನ ಸರ್ವೆ ನಂಬರ್ ಹಾಗೂ ಅದರ ಚೆಕ್ಕುಬಂದಿಗೆ ಒಳಪಡುವ ಸರ್ವೆ ನಂಬರ್‌ಗಳು ಅರಣ್ಯ ಇಲಾಖೆಗೆ ಒಳಪಟ್ಟಿರುವುದರ ಬಗ್ಗೆ ವಲಯ ಅರಣ್ಯಧಿಕಾರಿಗಳು ಹಾಗೂ ತಹಶೀಲ್ದಾರ್ ರವರುಗಳಿಗೆ ಬರೆದ ಪತ್ರಗಳಿಗೆ ಪ್ರತ್ಯುತ್ತರ ಪಡೆದ ನಂತರ ಹಾಗೂ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಸದರಿ ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡಗಾಡು (Hillock) ಪ್ರದೇಶವನ್ನು ಪರಿಶೀಲಿಸಿ ಅಭಿಪ್ರಾಯ ನೀಡಿದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆಗೊಳಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಭೂಮಾಲಿಕರು ಸಲ್ಲಿಸಿರುವ ದಾಖಲಾತಿಗಳಲ್ಲಿ ಮಾಲೀಕತ್ವಕ್ಕೆ ಸಂಬಂಧಪಟ್ಟಂತೆ ಯಾವುದೇ ನ್ಯೂನತೆಗಳು ಕಂಡುಬಂದಿಲ್ಲವಾದ್ದರಿಂದ ಕಾನೂನು ಸಲಹೆ ಅವಶ್ಯಕತೆ ಇರುವುದಿಲ್ಲವೆಂದು ಅಭಿಪ್ರಾಯಿಸಲಾಯಿತು. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ(ಖನಿಜ), ಮಡಿಕೇರಿ ಇವರು ದಿನಾಂಕ: 25–09–2023ರ ಪತ್ರದಲ್ಲಿ ವರದಿಯನ್ನು ನೀಡಿದ್ದು, ಸದರಿ ಪ್ರಸ್ತಾಪಿತ ಪ್ರದೇಶವು ಗುಡ್ಡದ ಕೆಳಭಾಗದಲ್ಲಿದ್ದು, ಸದರಿ ಗುಡ್ಡದ ಪ್ರದೇಶವೂ ಪೂರ್ವ ದಿಕ್ಕಿಗೆ ಅಂದಾಜು 25–30 ಡಿಗ್ರಿ ಇಳಿಜಾರಿನಿಂದ ಕೂಡಿದ್ದು, ಮರಗಿಡಗಳಿಂದ ಆವೃತವಾಗಿರುವುದು ಕಂಡುಬಂದಿರುತ್ತದೆ. ನಿವೇಶನ ನಿರ್ಮಾಣ ಸಮಯದಲ್ಲಿ ಸದರಿ ಗುಡ್ಡದ ಕೆಳಭಾಗವನ್ನು ಕಡಿದಿದ್ದು ಶಿಥಲೀಕರಣಗೊಂಡಿರುವ ಗ್ರೆನೈಟಿಕ್ ನೈಸ್ ಮಾದರಿಯ ಶಿಲೆಯು ಕಂಡುಬಂದಿರುತ್ತದೆ. ಮುಂದುವರೆದು ಗುಡ್ಡ ಕಡಿದಿರುವ ಪ್ರದೇಶವನ್ನು ಸ್ಥಿರಗೊಳಿಸಲು ಬೆಂಚ್ ಟೆರೆಸ್ಸಿಂಗ್ ಮಾಡಿ ಆಳ ಬೇರುಳ್ಳ ಸ್ಥಳೀಯ ಗಿಡ ಮರಗಳನ್ನು ಬೆಳೆಸಬಹುದು ಅಥವಾ ನುರಿತ ಇಂಜಿನಿಯರ್ ರವರಿಂದ ಪರಿಶೀಲಿಸಿಕೊಂಡು ಅಗತ್ಯವಿದ್ದಲ್ಲಿ ರಿಟೈನಿಂಗ್ ವಾಲ್ ನಿರ್ಮಿಸಬಹುದಾಗಿರುತ್ತದೆ ಹಾಗೂ ಮೇಲ್ನೋಟಕ್ಕೆ ಸದರಿ ಪ್ರದೇಶವು ಸ್ಥಿರವಾಗಿದ್ದು ಗುಡ್ಡಪ್ರದೇಶದಿಂದ ಹರಿದು ಬರುವ ಮಳೆ ನೀರು ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆಯನ್ನು ನಿಯಮಾನುಸಾರ ಮಾಡುವುದು ಅವಶ್ಯವಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ.

ಸದರಿ ಜಮೀನಿನಲ್ಲಿ ಇದುವರೆಗೂ ಯಾವುದೇ ಭೂಕುಸಿತ ಆಗಿಲ್ಲದೆ ಇರುವುದರಿಂದ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ನೀಡಿರುವ ವರದಿಯನ್ನು ಪರಿಗಣಿಸಿ ಹಾಗೂ ಭೂಮಾಲೀಕರು ಈಗಾಗಲೇ ದಿನಾಂಕ:29–09–2021 ರಂದು ನೀಡಿರುವ ಅಫೆಡೆವಿಟ್ (ಸಂಖ್ಯೆ: IN-KA17310737848486T) ಪ್ರಕಾರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿದ ಆರು ತಿಂಗಳ ಒಳಗಾಗಿ Retaining wall ಅನ್ನು ನಿರ್ಮಿಸುವ ಷರತ್ತಿಗೊಳಪಡಿಸಿ, ಇದರ ಬಗ್ಗೆ ಭೂಮಾಲೀಕರಿಂದ Indemnity Bond ಅನ್ನು ಪಡೆದು, ಪ್ರಶ್ನಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದೆಂದು ಮತ್ತು ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(04): ಕುಶಾಲನಗರ ಪುರಸಭೆ ವ್ಯಾಪ್ತಿಯ, ಬೈಚನಹಳ್ಳಿ ಗ್ರಾಮದ ಸ.ನಂ. 10/4, 10/3, 10/1, 89/7, 89/1, 11/5, 11/4, 11/2 ರಲ್ಲಿನ ಒಟ್ಟು 7.80 ಎಕರೆ ವಿಸ್ತೀರ್ಣದ ಅನುಮೋದಿತ ವಸತಿ ಬಡಾವಣೆಯಲ್ಲಿ

ನಿಯಮ ಉಲ್ಲಂಘನೆಯಾಗಿರುವ ಬಗ್ಗೆ (**ಮಾಲೀಕರು: ಶ್ರೀ ವೆಂಕಟೇಶ್, ಶ್ರೀ ಪರಿವಾರದ ಜವರಪ್ಪ ಮತ್ತು ಶ್ರೀ ಮಲ್ಲೇಶ್**).

ಟಿಪ್ಪಣಿ: ಕುಶಾಲನಗರ ಪುರಸಭೆ ವ್ಯಾಪ್ತಿಯ, ಬೈಚನಹಳ್ಳಿ ಗ್ರಾಮದ ಸ.ನಂ. 10/4, 10/3, 10/1, 89/7, 89/1, 11/5, 11/4, 11/2 ರಲ್ಲಿನ ಒಟ್ಟು 7.80 ಎಕರೆ ವಿಸ್ತೀರ್ಣದ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ದಿನಾಂಕ:30–10–2019 ರಂದು ಅಂತಿಮ ಅನುಮೋದನೆ ನೀಡಲಾಗಿದೆ ಹಾಗೂ ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿದೆ. ಸದರಿ ಅಂತಿಮ ಅನುಮೋದನೆ ಆದೇಶ ಪತ್ರದಲ್ಲಿ ಷರತ್ತುಗಳ ಸಂಖ್ಯೆ(8) ರಲ್ಲಿ ಬಡಾವಣೆ ಸುತ್ತಾ ಆವರಣ ಗೋಡೆ ನಿರ್ಮಿಸುವಂತಿಲ್ಲ ಹಾಗೂ ನಕ್ಷೆಯಲ್ಲಿ ತೋರಿಸಿರುವ ರಸ್ತೆಗಳಿಗೆ ಅಡ್ಡಲಾಗಿ ಯಾವುದೇ ತಡೆಗೋಡೆಗಳನ್ನು ನಿರ್ಮಿಸದೇ ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿಡತಕ್ಕದ್ದು ಎಂಬ ಷರತ್ತನ್ನು ವಿಧಿಸಲಾಗಿದೆ.

ಸದರಿ ಜಮೀನಿನ ಪಕ್ಕದ ಜಮೀನಾದ ಬೈಚನಹಳ್ಳಿ ಗ್ರಾಮದ ಸ.ನಂ. 10/2, ಸ.ನಂ. 89/4, ಮತ್ತು ಸ.ನಂ. 9/2 ರಲ್ಲಿನ ಒಟ್ಟು 4.05 ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಸಂಬಂಧ ಸ್ಥಳಪರಿಶೀಲನೆ ನಡೆಸುತ್ತಿರುವ ವೇಳೆಯಲ್ಲಿ ಈ ವಿನ್ಯಾಸದ ದಕ್ಷಿಣ ದಿಕ್ಕಿನಲ್ಲಿರುವ ಸ.ನಂ. 10/4, 10/3, 10/1, 89/7, 89/6, 89/1, 11/5, 11/4, 11/2 ರಲ್ಲಿನ ಒಟ್ಟು 7.80 ಎಕರೆ ವಿಸ್ತೀರ್ಣದ ವಸತಿ ಬಡಾವಣೆಯಲ್ಲಿ ರಸ್ತೆಗೆ Fencing ಅನ್ನು ಅಳವಡಿಸಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿರುವುದು ಕಂಡುಬಂದಿದೆ. ಅದಲ್ಲದೆ ರಸ್ತೆ ಸಂಪರ್ಕ ಕಲ್ಪಿಸುವ ಸರ್ವೆ ನಂ. 10/4, 10/3, 10/1 ರ ಜಾಗದಲ್ಲಿ "Stand post water units" ನಿರ್ಮಿಸಿರುವುದು ಕಂಡುಬಂದಿರುತ್ತದೆ.

ಆದ್ದರಿಂದ ಬೈಚನಹಳ್ಳಿ ಗ್ರಾಮದ ಸ.ನಂ. 10/4, 10/3, 10/1, 89/7, 89/6, 89/1, 11/5, 11/4, 11/2 ರಲ್ಲಿನ ಒಟ್ಟು 7.80 ಎಕರೆ ವಿಸ್ತೀರ್ಣದ ವಸತಿ ಬಡಾವಣೆಯ ಮಾಲೀಕರಾದ ಶ್ರೀ ವೆಂಕಟೇಶ್, ಶ್ರೀ ಪರಿವಾರದ ಜವರಪ್ಪ ಮತ್ತು ಶ್ರೀ ಮಲ್ಲೇಶ್ ಇವರುಗಳಿಗೆ ದಿನಾಂಕ:19–08–2023 ರಂದು ಈ ಕಛೇರಿಯಿಂದ ನೋಟೀಸ್ ನೀಡಿದ್ದು, ವಸತಿ ಬಡಾವಣೆಯಲ್ಲಿ ರಸ್ತೆಗೆ ಅಡ್ಡಲಾಗಿ Fencing ಮತ್ತು **"Stand post water units"** ನಿರ್ಮಿಸಿರುವ ಬಗ್ಗೆ ಸೂಕ್ತ ಕಾರಣವನ್ನು ಈ ಪತ್ರ ತಲುಪಿದ 7 ದಿನಗಳ ಒಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು ಹಾಗೂ ರಸ್ತೆ ಸಂಪರ್ಕ ಕಡಿತಗೊಂಡಿರುವುದರಿಂದ Fencing ಹಾಗೂ **"Stand post water units"** ಅನ್ನು ಈ ಕೂಡಲೇ ತೆರವುಗೊಳಿಸಬೇಕೆಂದು, ತಪ್ಪಿದ್ದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 17(4) ನಿಯಮ ಉಲ್ಲಂಘನೆ ಆಗಿರುವುದರಿಂದ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂಬುದಾಗಿ ನೋಟೀಸ್ ನೀಡಲಾಗಿದೆ ಹಾಗೂ ಪ್ರತಿಯನ್ನು ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರಿಗೆ ಕಳುಹಿಸಲಾಗಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ನೋಟೀಸ್‌ಗೆ ಬಡಾವಣೆ ಮಾಲೀಕರು ಇದುವರೆಗೂ ಯಾವುದೇ ಉತ್ತರ ನೀಡಿರುವುದಿಲ್ಲ. ರಸ್ತೆಗೆ ಅಡ್ಡಲಾಗಿ **"Stand post water units"** ಅನ್ನು ನಿರ್ಮಿಸಲು ಅನುಮತಿ ನೀಡಲಾಗಿದೆಯೇ ಅಥವಾ ಅರ್ಜಿದಾರರು ಯಾರಿಂದ ಅನುಮತಿ ಪಡೆದಿರುತ್ತಾರೆ ಎಂಬುದರ ಬಗ್ಗೆ ಮುಖ್ಯಾಧಿಕಾರಿ, ಪುರಸಭೆ ಇವರಿಂದ ಸೂಕ್ತ ಮಾಹಿತಿಯನ್ನು ಪಡೆಯುವುದು ಸೂಕ್ತವಾಗಿರುತ್ತದೆ. ಸದರಿ ವಿಷಯವನ್ನು ಪ್ರಾಧಿಕಾರದ ಚರ್ಚೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಬಡಾವಣೆ ಮಾಲೀಕರಿಗೆ ಮತ್ತೊಮ್ಮೆ ನೋಟೀಸ್ ನೀಡಿ 15 ದಿನಗಳ ಒಳಗಾಗಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ Fencing ಮತ್ತು **"Stand post water units"** ಅನ್ನು ತೆರವುಗೊಳಿಸಬೇಕೆಂದು, ಇಲ್ಲವಾದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ ಸೆಕ್ಷನ್ 17(4) ಮತ್ತು 17(5) ರನ್ವಯ ಪ್ರಾಧಿಕಾರದಿಂದಲೇ ತೆರವುಗೊಳಿಸಬೇಕೆಂದು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು

ಬಡಾವಣೆ ಮಾಲೀಕರಿಂದ ವಸೂಲಿ ಮಾಡಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(05): ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಗೆ ಕಾನೂನು ಸಲಹೆ ಪಡೆದುಕೊಳ್ಳಲು ವಕೀಲರನ್ನು ನೇಮಿಸಿಕೊಳ್ಳುವ ಬಗ್ಗೆ

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಗೆ ವಿನ್ಯಾಸ ಅನುಮೋದನೆ ಕೋರಿ ಮತ್ತು ಕಟ್ಟಡ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ಕೋರಿ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ಕೆಲವು ಕಡತಗಳಲ್ಲಿ ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳು ಕಂಡುಬರುತ್ತಿರುತ್ತದೆ. ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಮತ್ತು ಇನ್ನಿತರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಕಾನೂನು ಸಲಹೆಗಳನ್ನು ಪಡೆದುಕೊಳ್ಳಲು ಪ್ರಾಧಿಕಾರದ ಕಛೇರಿಗೆ ವಕೀಲರ ಅವಶ್ಯಕತೆ ಇರುತ್ತದೆ. ಆದ್ದರಿಂದ ಕಾನೂನು ಸಲಹೆ ಪಡೆಯಲು ಪ್ರಾಧಿಕಾರಕ್ಕೆ ಒಬ್ಬ ವಕೀಲರನ್ನು ನೇಮಿಸಿಕೊಳ್ಳುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ನಿರ್ದಿಷ್ಟ ಕಡತಗಳಲ್ಲಿ ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳು ಕಂಡುಬಂದಾಗ ಮಾತ್ರ ಕಾನೂನು ಸಲಹೆ ಪಡೆದುಕೊಳ್ಳಬೇಕೆಂದು ಹಾಗೂ ಪ್ರಾಧಿಕಾರಕ್ಕೆ ಪ್ರತ್ಯೇಕವಾಗಿ ವಕೀಲರನ್ನು ನೇಮಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(06): ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆ:–

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/9 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಬಿ.ಪಿ. ವಿನೋದ್ ಕುಮಾರ್**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/9 ರಲ್ಲಿ 0.05 ಎಕರೆ ವಿಸ್ತೀರ್ಣದ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 397950 ದಿನಾಂಕ: 30–09–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ 3.0ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 166.13 ಚ.ಮೀ (ಶೇ. 84.71%) ಮತ್ತು ರಸ್ತೆ ವಿಸ್ತರಣೆಗಾಗಿ 29.98 ಚ.ಮೀ (ಶೇ. 15.29%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:19–08–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/10 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಬಿ.ಪಿ. ರೂಪೇಶ್ ಕುಮಾರ್**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/10 ರಲ್ಲಿ 0.05 ಎಕರೆ ವಿಸ್ತೀರ್ಣದ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 401938 ದಿನಾಂಕ: 15–06–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ 3.0ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 170.00 ಚ.ಮೀ (ಶೇ. 85.85%) ಮತ್ತು ರಸ್ತೆ ವಿಸ್ತರಣೆಗಾಗಿ 30.0 ಚ.ಮೀ (ಶೇ. 15.00%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:19–08–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/6 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಬಿ.ಪಿ. ರೂಪೇಶ್ ಕುಮಾರ್**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/6 ರಲ್ಲಿ 0.10 ಎಕರೆ ವಿಸ್ತೀರ್ಣದ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 401937 ದಿನಾಂಕ:30–09–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ 3.0ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 345.74 ಚ.ಮೀ (ಶೇ. 97.74%) ಮತ್ತು ರಸ್ತೆ ವಿಸ್ತರಣೆಗಾಗಿ 56.96 ಚ.ಮೀ (ಶೇ. 14.15%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 19–08–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಚರ್ಚೆ: ಸದರಿ ಪ್ರಸ್ತಾವನೆಗಳ ಬಗ್ಗೆ ಚರ್ಚಿಸಿ, ಮಾನ್ಯ ಅಧ್ಯಕ್ಷರು/ಉಪವಿಭಾಗಾಧಿಕಾರಿಗಳು ಮಾದಾಪಟ್ಟಣ ಗ್ರಾಮದ ಸ.ನಂ. 11 ರಲ್ಲಿ 0.05 ಎಕರೆ ಮತ್ತು 0.10 ಎಕರೆ ಜಮೀನುಗಳಿಗೆ ಏಕನಿವೇಶನ ನಕ್ಷೆ ಅನುಮೋದನೆ ಹೇಗೆ ನೀಡಲಾಗಿದೆ ಎಂದು ಪ್ರಶ್ನಿಸಿದ್ದು, ಇದಕ್ಕೆ ಸದಸ್ಯಕಾರ್ಯದರ್ಶಿಯವರು ಪ್ರಶ್ನಿತ ಜಮೀನುಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು ಈಗಾಗಲೇ ದಿನಾಂಕ: 30–09–2022 ರಂದು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ ಹಾಗೂ ಸದರಿ ಜಮೀನಿಗೆ ಸಂಪರ್ಕ ಹೊಂದಿರುವ ರಸ್ತೆಗಳನ್ನು ಅರ್ಜಿದಾರರು ಈಗಾಗಲೇ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವುದರಿಂದ ಸದರಿ ಜಮೀನುಗಳ ವಸತಿ ಉದ್ದೇಶದ ಏಕ–ನಿವೇಶನ ನಕ್ಷೆಗೆ ಅನುಮೋದನೆ ನೀಡಲಾಗಿದೆ ಎಂದು ಉತ್ತರಿಸಿದರು. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಇದೇ ಮಾದರಿಯಲ್ಲಿ 1.00 ಎಕರೆಗಿಂತ ಕಡಿಮೆ ವಿಸ್ತೀರ್ಣದ ವಸತಿ ಉದ್ದೇಶದ ಏಕ–ನಿವೇಶನ ನಕ್ಷೆಗಳಿಗೆ ಅವಕಾಶ ನೀಡಬಾರದೆಂದು ಹಾಗೂ ಸರಿಯಾಗಿ ಪರಿಶೀಲಿಸಿದ ನಂತರ ಕ್ರಮಕೈಗೊಳ್ಳಬೇಕೆಂದು ಸಭೆಯು ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ನಿರ್ಣಯಿಸಿತು.

ವಿಷಯಸಂಖ್ಯೆ(07): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ): ಮಾದಾಪಟ್ಟಣ ಗ್ರಾಮದ ಸ.ನಂ. 86/4 ರಲ್ಲಿನ 0.79 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು: ಶ್ರೀ ಪುರಷೋತ್ತಮ್ ರೈ**)

ನಿರ್ಣಯ: ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ಅನುಮೋದನೆ ನೀಡುವಂತೆ ದಿನಾಂಕ:20–09–2023 ರಂದು ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ ಮತ್ತು ಗ್ರಾಮ ನಕ್ಷೆಯನ್ನು ಸಲ್ಲಿಸಿದ ನಂತರ ಹಾಗೂ ಸದರಿ ಜಮೀನಿನ ಸ್ಥಳಪರಿಶೀಲನೆ ನಡೆಸಿದ ನಂತರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಆ): ಮಾದಾಪಟ್ಟಣ ಗ್ರಾಮದ ಸ.ನಂ. 93/3 ರಲ್ಲಿನ 0.62 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು: ಶ್ರೀ ಪುರಷೋತ್ತಮ್ ರೈ**).

ನಿರ್ಣಯ: ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ಅನುಮೋದನೆ ನೀಡುವಂತೆ ದಿನಾಂಕ:20–09–2023 ರಂದು ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ ಮತ್ತು ಗ್ರಾಮ ನಕ್ಷೆಯನ್ನು ಸಲ್ಲಿಸಿದ ನಂತರ ಹಾಗೂ ಸದರಿ ಜಮೀನಿನ ಸ್ಥಳಪರಿಶೀಲನೆ ನಡೆಸಿದ ನಂತರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಇ): ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಕಟ್ಟಡವನ್ನು ಶ್ರೀ ಅಜಿತ್‌ಕುಮಾರ್ ಇವರಿಂದ ಬಾಡಿಗೆಗೆ ಪಡೆಯಲಾಗಿದ್ದು, ಸದರಿ ಕಟ್ಟಡದ ವಿದ್ಯುತ್ ಸಂಪರ್ಕವನ್ನು ವಿದ್ಯುತ್ ಇಲಾಖೆಯಿಂದ ನವೀಕರಿಸಿಕೊಡಲು (Upgrade ಮಾಡಲು) ಕಟ್ಟಡದ ಮಾಲೀಕರಿಗೆ ಪತ್ರ ಬರೆಯುವಂತೆ ಅಧ್ಯಕ್ಷರು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿದನ್ವಯ ಕಟ್ಟಡದ ಮಾಲೀಕರಿಗೆ ವಿದ್ಯುತ್ ಸಂಪರ್ಕವನ್ನು ನವೀಕರಿಸಿಕೊಡಲು ಪತ್ರ ಬರೆಯುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–

ಸದಸ್ಯ ಕಾರ್ಯದರ್ಶಿ
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ

ಸಹಿ/–

ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ